ಸಹ ಪರಿಶೀಲಿಸುತ್ತಿದೆ. ಇದನ್ನು ನಿರ್ಣಯಗೊಳಿಸುವಾಗ ಜನ ಸಂಖ್ಯೆ ಅಧಿಕ ಇರುವ ಪ್ರದೇಶಗಳ ಬಗ್ಗೆಯೂ ಪರಿಗಣಿಸಲಾಗುವುದು.

1991-92ನೇ ಸಾಲಿನಲ್ಲಿ ನಡೆದ ಡಕಾಯಿತಿಗಳ ಸಂಖ್ಯೆ

40 (311) ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ನಡೆದ ಡಕಾಯಿತಿಗಳ ಸಂಖ್ಯೆ ಎಷ್ಟು?
2. ಈ ಡಕಾಯಿತಿಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ನಡೆದ ಡಕಾಯಿತಿಗಳ ಸಂಖ್ಯೆ ಎಷ್ಟು?
3. ಈ ಡಕಾಯಿತಿಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

1) 1991 - 149

1992 – 11

2) 1991 -- 21

1992 – ಇಲ್ಲ

3) ದರೋಡೆಗಳನ್ನು ತಡೆಯಲು ತೆಗೆದುಕೊಂಡ ಕ್ರಮ ಈ ಕೆಳಕಂಡಂತಿವೆ:-

1) ಪೋಲೀಸ್ ಸಂಚಾರಿ ದಳ ಮತ್ತು ವಾರ್ತಾ ಸಾಧನಗಳನ್ನು ಸುಧಾರಿಸಲಾಗಿದೆ.

2) ನಿರ್ಜನ ಪ್ರದೇಶಗಳಲ್ಲಿರುವ ಕಟ್ಟಡಗಳಿಗೆ ಮತ್ತು ಜಮೀನಿನಲ್ಲಿರುವ ಒಂಟಿ ಮನೆಗಳಿಗೆ ವಿಶೇಷ ಭದ್ರತೆ ಹಾಗೂ ಕಾವಲಿಗಾಗಿ ಪೋಲೀಸ್ ಸಿಬ್ಬಂದಿಯವರು ಆಗಾಗ್ಗೆ ಭೇಟಿ ನೀಡಬೇಕೆಂದು ತಿಳಿಸಲಾಗಿದೆ. ಮತ್ತು ಸಿಬ್ಬಂದಿಯವರು ಆಗಾಗ್ಗೆ ಭೇಟಿ ಮಾಡುತ್ತಿದ್ದಾರೆ. ಪೋಲೀಸ್ ಪಹರೆಯನ್ನು ಪ್ರಭಾವಿತ ಪ್ರದೇಶಗಳಲ್ಲಿ ಚುರುಕುಗೊಳಿಸಿ, ನಿವಾರಕ ವ್ಯಕ್ತಿಗಳನ್ನು ಬಂಧಿಸಲಾಗುತ್ತಿದೆ.

3) ನಿರ್ಜನ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಿಗೆ ಧಾರಾಳವಾಗಿ ಬಂದೂಕದ ಪರವಾನಿಗೆಯನ್ನು ನೀಡಲಾಗುತ್ತಿದೆ.

4) ರಾತ್ರಿ ಗಸ್ತಿಗೆ ಗ್ರಾಮ ರಕ್ಷಕ ದಳ, ದಳಪತಿ ಮತ್ತು ಗೃಹ ರಕ್ಷಕ ದಳದ ಸೇವೆಯನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ.

5) ರಾಜ್ಯದಲ್ಲಿ ದರೋಡೆಕೋರರನ್ನು ಹಿಡಿಯಲು ಬಳ್ಳಾರಿ ಮತ್ತು ಗುಲ್ಬರ್ಗಾದಲ್ಲಿ ಎರಡು ದರೋಡೆ ನಿರೋಧಕ ದಳಗಳನ್ನು ಸಿ.ಐ.ಡಿ. ಸಂಸ್ಥೆಯಲ್ಲಿ ನೇಮಿಸಲಾಗಿದೆ.

6) ಕರ್ನಾಟಕ ಪೋಲೀಸ್ ಅಧಿಕಾರಿಗಳು ತಮಿಳುನಾಡು ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ಪೋಲೀಸ್ ಅಧಿಕಾರಿಗಳೊಂದಿಗೆ ಮಾಹಿತಿ ವಿನಿಮಯ ಮತ್ತು ಕಾರ್ಯತಂತ್ರವನ್ನು ರೂಪಿಸಿ ಡಕಾಯಿತರ ಗುಂಪಿನ ಚಲನವಲನಗಳನ್ನು ತಿಳಿದು ಮತ್ತು ಅವರನ್ನು ಹಿಡಿಯಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

7) ದರೋಡೆಕೋರರನ್ನು ಪತ್ತೆ ಹಚ್ಚಲು ತೀವ್ರವಾದ ಪ್ರಯತ್ನವನ್ನು ಮುಂದುವರಿಸಲಾಗಿದೆ.

8) ಗೃಹ ಸಚಿವರ ಮಟ್ಟದಲ್ಲಿ ಆಗಾಗ ಬಳ್ಳಾರಿ ಹೊಸಪೇಟೆ ಮತ್ತು ಬೀದರ್‌ನಲ್ಲಿ ಸಭೆ ನಡೆದು ಕಾರ್ಯಕ್ರಮವನ್ನು ಚುರುಕುಗೊಳಿಸಲಾಗುತ್ತಿದೆ.

9) ರಾತ್ರಿ ವೇಳೆ ಸಂಚರಿಸುವ ಬಸ್‌ಗಳಲ್ಲಿ ಸಶಸ್ತ್ರ ಬಂದೋಬಸ್ತ್ ಒದಗಿಸಿ ಕಾನ್ವಾಯ್ ಪದ್ಧತಿಯಲ್ಲಿ ಸಂಚಾರಿ ವಾಹನಗಳನ್ನು ಬಿಡುತ್ತಿರಲಾಗಿದೆ.